



# ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

## ಭಾಗ ೧೭

ಸ್ವಾಮಿ ವಿರಜಾನಂದರು ಕರಾಚಿಯಲ್ಲಿದ್ದಾಗ ಅಕಸ್ಮಾತ್ತಾಗಿ ಮಠದ ಸಂನ್ಯಾಸಿಗಳಾದ ಬುಡೋ ಬಾಬಾ (ಸ್ವಾಮಿ ಸಚ್ಚಿದಾನಂದ) ಹಾಗೂ ಸುರೇಶ್ವರಾನಂದರ ಭೇಟಿಯಾಯಿತು. ಅವರಿಬ್ಬರೂ ದ್ವಾರಕಾ ಯಾತ್ರೆಗೆ ಹೋಗುತ್ತಿದ್ದರು. ಸ್ವಾಮಿ ವಿರಜಾನಂದರಿಗೂ ಆ ತೀರ್ಥವನ್ನು ನೋಡುವ ಇಚ್ಛೆಯಿದ್ದುದರಿಂದ, ಕರಾಚಿಯ ಕೆಲಸವನ್ನು ಮುಗಿಸಿಕೊಂಡು ಅವರೊಡನೆ ಹೊರಟು, ಸ್ಟೀಮರಿನಲ್ಲಿ ಪೋರ್‌ಬಂದರನ್ನು ತಲುಪಿದರು. ಪೋರ್‌ಬಂದರಿನ ಆಗಿನ ದಿವಾನರಾದ ಮಣಿಲಾಲ್ ಠಾಕೂರ್ ಎಂಬುವರು ರಾಮಕೃಷ್ಣ ಸಂಘದ ಹಿತಾಕಾಂಕ್ಷಿ ಬಂಧುಗಳು. ಅವರು ತಮ್ಮ ಖರ್ಚಿನಲ್ಲೇ ಇವರೆಲ್ಲರೂ ದ್ವಾರಕೆಗೆ ಹೋಗಿ ಬರಲು ಗಾಡಿಯ ವ್ಯವಸ್ಥೆಯನ್ನು ಮಾಡಿದರು. ಅರುವತ್ತು ಮೈಲಿಯ ಪ್ರಯಾಣ; ರಸ್ತೆ ಅಲ್ಲಲ್ಲಿ ಬಹಳ ಕೆಟ್ಟಿತ್ತು. ಎರಡು ಹಗಲು, ಎರಡು ರಾತ್ರಿ ಎತ್ತಿನ ಗಾಡಿಯ ಕುಲುಕಾಟದಿಂದ ಮೂಳೆಗಳೆಲ್ಲ ನಜ್ಜುಗುಜ್ಜಾದಂತಾಯಿತು! ದ್ವಾರಕೆಯಲ್ಲಿ ಸ್ವಾಮಿ ಭಜನಾನಂದರೆಂಬ ವೃದ್ಧ ವೈಷ್ಣವ ಸಾಧುಗಳನ್ನು ಕಂಡು ವಿರಜಾನಂದರಿಗೆ ತುಂಬ ಹರ್ಷವಾಯಿತು. ಆ ಸಾಧುವು ಎಂಭತ್ತು ವರ್ಷಗಳಿಂದಲೂ ಅಲ್ಲಿಯೇ ವಾಸವಾಗಿದ್ದರು. ಯಾರೊಂದಿಗೂ ಹೆಚ್ಚಾಗಿ ಬೆರೆಯುತ್ತಿರಲಿಲ್ಲ; ಸದಾ ಅಂತರ್ಮುಖಿಗಳು. ಮುಖಮಂಡಲದಲ್ಲಿ ಸ್ನಿಗ್ಧ ಶಾಂತಿಯೂ ಶಿಶುವಿನ ಸರಳತೆಯೂ ದೇದೀಪ್ಯಮಾನವಾಗಿತ್ತು. ಇವರು ಅಲ್ಲಿಗೆ ಹೋದಾಗ ಅವರಿಗೆ ಜ್ವರ ಮತ್ತು ಕಣ್ಣುಬೇನೆಯಿಂದಾಗಿ ಆರೋಗ್ಯ ಚೆನ್ನಾಗಿರಲಿಲ್ಲ. ಈ ಸಂನ್ಯಾಸಿಗಳನ್ನು ನೋಡಿ ಮುಗ್ಧ ಬಾಲಕನಂತೆ, ''ನನ್ನ ಈ ಜ್ವರ, ಕಣ್ಣುಬೇನೆ ಬಿಟ್ಟುಹೋಗುತ್ತೆ ತಾನೆ?'' ಎಂದು ಪ್ರಶ್ನಿಸಿದ್ದರು. ''ಹೌದು ಬಿಟ್ಟು ಹೋಗದೆ ಏನು?'' ಎಂದು ಸಾಂತ್ವನ ನೀಡಿದಾಗ ಅವರು ಮಗುವಿನಂತೆ ಅವರ ಮಾತಿನಲ್ಲಿ ನಂಬಿಕೆಯಿಟ್ಟು, ನಿರಾಳಗೊಂಡರು. ಸ್ವಾಮಿ ವಿರಜಾನಂದರು ದ್ವಾರಕೆಯಿಂದ ಜುನಾಗಢಕ್ಕೆ ಬಂದು, ಅಲ್ಲಿಯ ದಿವಾನರ ಮ್ಯಾನೇಜರಾಗಿದ್ದ ಶ್ರೀಯುತ ಛಗನ್‌ಲಾಲ್ ಪಾಂಡೆಯವರ ಮನೆಯಲ್ಲಿ ಇಳಿದುಕೊಂಡರು. ಸ್ವಾಮಿ ವಿವೇಕಾನಂದರು ೧೮೯೧-೧೮೯೨ರಲ್ಲಿ ಜುನಾಗಢಕ್ಕೆ ಬಂದಿದ್ದಾಗ ದಿವಾನರಾದ ಹರಿದಾಸ್-ವಿಹಾರಿದಾಸ್‌ರವರಲ್ಲಿ ಉಳಿದುಕೊಂಡಿದ್ದರು; ಆಗ ಛಗನ್‌ಲಾಲರು ಸ್ವಾಮೀಜಿಯವರ ನಿಕಟ ಭಕ್ತರೂ ಅನುರಕ್ತ ಬಂಧುಗಳೂ ಆಗಿಬಿಟ್ಟರು. ಈಗ ಕಾಳೀಕೃಷ್ಣರಿಗೆ ಬಹಳ ಆದರೋಪಚಾರ ಮಾಡಿ, ಅವರ ಕೆಲಸದಲ್ಲಿ ನೆರವಾಗತೊಡಗಿದರು. ದಿವಾನರೊಂದಿಗೂ ಸ್ವಾಮಿ ವಿರಜಾನಂದರ ಭೇಟಿಯಾಯಿತು. ಅವರೂ ಸಹ ಸ್ವಾಮೀಜಿಯವರ ಪ್ರಿಯ ಸ್ನೇಹಿತ ಹಾಗೂ ಅಭಿಮಾನಿ. ಅಮೆರಿಕೆಗೆ ಹೋಗುವ ಮುನ್ನ ಪರಿವ್ರಾಜಕರಾಗಿದ್ದ ಸ್ವಾಮೀಜಿಯವರು ಜುನಾಗಢದಲ್ಲಿ ಅನೇಕ ದಿನಗಳನ್ನು ಈ ದಿವಾನರೊಂದಿಗೆ ಕಳೆದಿದ್ದರು ಮತ್ತು ಇವರನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರು. ಸ್ವಾಮೀಜಿಯವರು ಅಮೆರಿಕದಿಂದ ಬರೆದ ಪತ್ರಗಳ ಪೈಕಿ ಬಹಳಷ್ಟು ವಿಹಾರಿದಾಸ್‌ಜಿಗೆ ಬರೆದವುಗಳಾಗಿವೆ. ಸ್ವಾಮೀಜಿ ಹಾಗೂ ದಿವಾನರಲ್ಲಿ ಪರಸ್ಪರ ಪ್ರೀತಿ-ವಿಶ್ವಾಸಗಳು ಎಷ್ಟು ಆಳವಾಗಿತ್ತೆಂಬುದು ಈ ಪತ್ರಗಳನ್ನು ಓದಿದರೆ ತಿಳಿಯು ತ್ತದೆ. ಸ್ವಾಮಿ ವಿರಜಾನಂದರು ಸ್ವಾಮೀಜಿಯವರ ಸಂನ್ಯಾಸಿ ಶಿಷ್ಯರಲ್ಲೊಬ್ಬರೆಂದು ತಿಳಿದು ದಿವಾನ್‌ಜೀ ಅವರನ್ನು ತುಂಬ ಪ್ರೀತ್ಯಾದರಗಳಿಂದ ಬರಮಾಡಿಕೊಂಡರು. ಜುನಾಗಢದಲ್ಲಿ ಸ್ವಾಮೀಜಿಯವರ ಅನೇಕ ಗುಣಗ್ರಾಹಿ ಭಕ್ತರಿದ್ದರು. ಅವರೆಲ್ಲ ಸ್ವಾಮೀಜಿಯವರು ಅಲ್ಲಿದ್ದಾಗ ನಡೆದ ಅನೇಕ ಘಟನೆಗಳನ್ನು ರಸವತ್ತಾಗಿ ವರ್ಣಿಸುತ್ತಿದ್ದರು. ಅವರಿಗೆ ಸ್ವಾಮೀಜಿಯವರಲ್ಲಿದ್ದ ಅದ್ಭುತವಾದ ಶ್ರದ್ಧಾಭಕ್ತಿಗಳನ್ನು ಕಂಡು ಸ್ವಾಮಿ ವಿರಜಾನಂದರು ಆಶ್ಚರ್ಯಚಕಿತರಾದರು.

ಜುನಾಗಢದಲ್ಲಿದ್ದಾಗಲೇ ಸ್ವಾಮಿ ವಿರಜಾನಂದರು ಪ್ರಸಿದ್ಧ ಜೈನತೀರ್ಥವಾದ ಗಿರ್ನಾರಿನ ದರ್ಶನ ಮಾಡಲು ಹೋದರು. ಪರ್ವತದ ಮೇಲೆ ಅರಣ್ಯದಿಂದ ಆವೃತವಾದ ಗಿರ್ನಾರಿನ ರಮಣೀಯ ದೃಶ್ಯವು ಅವರಿಗೆ ತುಂಬ ಆನಂದವನ್ನು ತಂದಿತು. ಹಿಂದೆ ಸಾಧುಗಳೊಬ್ಬರು ಇಲ್ಲಿ ತಪಸ್ಸು ಮಾಡುತ್ತ ವಾಸವಾಗಿದ್ದು, ಜನರ ಕಣ್ಣಿಗೆ ಬೀಳುತ್ತಿರಲಿಲ್ಲವೆಂದೂ, ಎಲ್ಲಿಂದಲೋ ಒಂದು ಹಸು ನಿತ್ಯವೂ ಈ ಸಾಧುವಿನ ಬಳಿ ಬರುತ್ತಿದ್ದು, ಅದು ಕೊಡುತ್ತಿದ್ದ ಹಾಲಿನಿಂದಲೇ ಜೀವನ ಧಾರಣೆ ಮಾಡಿಕೊಂಡಿದ್ದರೆಂಬ ಕಿಂವದಂತಿ ಇತ್ತು. ಇದನ್ನು ಕೇಳಿದ ಸ್ವಾಮಿ ವಿರಜಾನಂದರು ಆಶ್ಚರ್ಯಚಕಿತರಾದರು. ಗಿರ್ನಾರಿನ ಅರಣ್ಯದಲ್ಲಿ ತುಂಬ ಸಿಂಹಗಳಿರುವುದಾಗಿ ತಿಳಿದುಬಂತು. ಜುನಾಗಢದ ನವಾಬನ ಮೃಗಾಲಯದಲ್ಲಿದ್ದ ೨೦-೨೫ ಭೀಮಾಕಾರದ ಸಿಂಹಗಳನ್ನು ನೋಡಿ ಸ್ವಾಮಿ ವಿರಜಾನಂದರು ಖುಷಿಪಟ್ಟರು.

ಜುನಾಗಢದ ಕೆಲಸ ಮುಗಿಸಿದ ಸ್ವಾಮಿ ವಿರಜಾನಂದರು ಅಹಮದಾಬಾದಿಗೆ ಬಂದರು. ಅಲ್ಲಿಯ ಕೆಲಸವನ್ನು ಉತ್ಸಾಹ

ದಿಂದ ಮಾಡುತ್ತಿದ್ದರು; ಅಷ್ಟರಲ್ಲಿ ಸ್ವಾಮೀಜಿಯವರ ದೇಹ ತ್ಯಾಗದ ದಾರುಣ ಸುದ್ದಿಯು ತಂತಿಯ ಮೂಲಕ ತಿಳಿದುಬಂತು. ಅಯ್ಯೋ! ಸ್ವಾಮೀಜಿಯವರು ಇಷ್ಟು ಬೇಗ ಈ ಮರ್ತ್ಯಲೋಕ ವನ್ನು ತ್ಯಜಿಸಿ ಹೋಗುವರೆಂದು ವಿರಜಾನಂದರು ಕನಸಿನಲ್ಲೂ ನೆನೆದಿರಲಿಲ್ಲ. ಅವರ ಹೃನ್ಮನಗಳು ಭಗ್ನವಾದವು, ಸಂಕಲ್ಪಿಸಿದ್ದ ಕೆಲಸಗಳು ಏರುಪೇರಾದವು. ಕೆಲಸ ಮಾಡುವ ಉತ್ಸಾಹವೆಲ್ಲ ಕ್ಷಣಮುಹೂರ್ತದಲ್ಲಿ ಉಡುಗಿಹೋದವು. ಪ್ರಪಂಚವೇ ಶೂನ್ಯ ವೆನಿಸತೊಡಗಿತು. ಅಹಮದಾಬಾದಿನ ಕೆಲಸವನ್ನು ಹೇಗೋ ಬೇಗ ಮುಗಿಸಿ, ಮಾಯಾವತಿಗೆ ಹಿಂತಿರುಗಿದರು. 'ಪ್ರಬುದ್ಧ ಭಾರತ'ದ ಕೆಲಸಕ್ಕಾಗಿ ಅವರು ಮಾಯಾವತಿಯಿಂದ ಹೊರಟು ಹತ್ತು ತಿಂಗಳುಗಳೇ ಉರುಳಿದ್ದವು. ಉದ್ದೇಶವು ನಿರೀಕ್ಷೆಗಿಂತ ಹೆಚ್ಚಾಗಿಯೇ ಸಫಲಗೊಂಡಿತ್ತು. ಅನೇಕ ಸ್ಥಳಗಳಲ್ಲಿ ತಿರುಗಿ ನೂರಾರು ಚಂದಾದಾರರನ್ನು 'ಪ್ರಬುದ್ಧ ಭಾರತ'ದ ಪಟ್ಟಿಯಲ್ಲಿ ಸೇರಿಸಿದ್ದರು. ಅದರಲ್ಲೂ ಅನೇಕರು ಮುಸಲ್ಮಾನರು! ಇದಲ್ಲದೆ ಸ್ವಾಮಿ ವಿರಜಾನಂದರ ಶಾಂತ, ಉದಾರ ಹಾಗೂ ಸರಳ ವ್ಯಕ್ತಿತ್ವದ ಸಂಸರ್ಗಕ್ಕೆ ಬಂದು, ಅವರಿಂದ ಆಧ್ಯಾತ್ಮಿಕ ವಿಷಯಗಳ ಬಗ್ಗೆ ಆಳವಾದ ವಿಚಾರಗಳನ್ನು ಆಲಿಸಿದ್ದ ಅನೇಕರು ಆಧ್ಯಾತ್ಮಿಕವಾಗಿ ಉಪಕೃತರಾಗಿದ್ದರು. ಇವು ಸ್ವಾಮಿ ವಿರಜಾನಂದರ ಪರ್ಯ ಟನೆಯ ಮತ್ತೊಂದು ಸಾರ್ಥಕತೆ ಎಂದು ಹೇಳಬಹುದು.[೧]

ಸ್ವಾಮೀಜಿಯವರ ಮಹಾಸಮಾಧಿಯಿಂದಾಗಿ ಮಾಯಾವತಿ ಯಲ್ಲಿ ಎಲ್ಲರೂ ಶೋಕತಪ್ತರಾಗಿದ್ದರು. ಅಲ್ಲಿನ ಕೆಲಸವು ಸ್ವಾಮೀಜಿಯವರ ನಿರ್ದೇಶನದಿಂದಲೇ ಪ್ರಾರಂಭವಾಗಿತ್ತು ಮತ್ತು ಅದನ್ನು ನಡೆಸಿಕೊಂಡು ಹೋಗಬೇಕೆಂಬುದೇ ಅವರ ಆದೇಶವೂ ಆಗಿತ್ತು. ಈ ಕಾರಣದಿಂದ ಎಲ್ಲರೂ ತಮ್ಮಲ್ಲಿ ಹೇಗೋ ಉತ್ಸಾಹ-ಬಲವನ್ನು ತುಂಬಿಕೊಂಡು ಅಂದಂದಿನ ಕೆಲಸಕಾರ್ಯ ಗಳನ್ನು ಮಾಡುತ್ತ ಹೋಗುತ್ತಿದ್ದರು. ಆದರೆ ವಿರಜಾನಂದರಿಗೆ ಮಾತ್ರ ಎಷ್ಟು ಪ್ರಯತ್ನಿಸಿದರೂ ಉತ್ಸಾಹ ತಂದುಕೊಳ್ಳಲಾಗಲಿಲ್ಲ. ಅಷ್ಟೇ ಅಲ್ಲದೆ, ಅವರು ಮಾಯಾವತಿಗೆ ಹಿಂತಿರುಗಿದ ನಂತರ ಕೇಳಿದ ಮತ್ತೊಂದು ಸಮಾಚಾರವು ಅವರ ಹೃದಯವನ್ನು ಹಿಂಡಿಬಿಟ್ಟಿತು; ತುಂಬ ಕ್ಷೋಭೆಗೊಳಗಾದರು. ಅದೇನೆಂದರೆ, ವಿರಜಾನಂದರು ಭಾರತದ ಪಶ್ಚಿಮ ಪ್ರಾಂತ್ಯಗಳಲ್ಲಿ 'ಪ್ರಬುದ್ಧ ಭಾರತ'ದ ಕೆಲಸದಲ್ಲಿ ತೊಡಗಿದ್ದಾಗ ಸ್ವಾಮೀಜಿಯವರಿಂದ ಮಿಸೆಸ್ ಸೇವಿಯರ್ ಮತ್ತು ಸ್ವರೂಪಾನಂದರಿಗೆ ಪತ್ರವೊಂದು ಬಂದಿತ್ತು. ಅದರಲ್ಲಿ, 'ಮಾಯಾವತಿಯ ಕೆಲಸಕ್ಕೆ ಹೆಚ್ಚು ತೊಂದರೆ ಮಾಡಿಕೊಳ್ಳದೆ, ಕಾಳೀಕೃಷ್ಣನನ್ನು ನನ್ನ ಸೇವೆಗೆ ಬಿಡುವು ಮಾಡಲು ಸಾಧ್ಯವಾದರೆ ತಕ್ಷಣವೇ ಅವನನ್ನು ಮಠಕ್ಕೆ ಕಳುಹಿಸುವುದು' ಎಂದು ಬರೆದಿದ್ದರು[೨]. ಆ ವೇಳೆಯಲ್ಲಿ ಚಂದಾದಾರರನ್ನು ಸಂಗ್ರ ಹಿಸುವ ಕೆಲಸ ಆಶಾಜನಕವಾದ ರೀತಿಯಲ್ಲಿ ಮುಂದುವರಿದಿತ್ತು. ಆದ್ದರಿಂದ ಮದರ್ ಹಾಗೂ ಸ್ವರೂಪಾನಂದರು ಸ್ವಾಮೀಜಿ ಯವರಿಗೆ ವಿಷಯವನ್ನೆಲ್ಲ ವಿವರಿಸಿ, ಕಾಳೀಕೃಷ್ಣರು ಈಗ ಹಿಂದಿರುಗಿದರೆ ಪತ್ರಿಕೆಯ ಕೆಲಸಕ್ಕೆ ಹಾನಿಯಾಗುವುದೆಂದು ತಿಳಿಸಿ ಪತ್ರ ಬರೆದಿದ್ದರು. ಸ್ವಾಮೀಜಿಯವರ ಪತ್ರದ ವಿಷಯವನ್ನು ಸ್ವಾಮಿ ವಿರಜಾನಂದರಿಗೆ ಆಗ ತಿಳಿಸಿರಲಿಲ್ಲ.

ಹಲವು ತಿಂಗಳಿಂದ ನಾನಾಸ್ಥಳಗಳಲ್ಲಿ ಒಂದೇ ಸಮನೆ ತಿರು ಗಾಡಿದ್ದರಿಂದ ಸ್ವಾಮಿ ವಿರಜಾನಂದರು ತುಂಬ ಬಳಲಿದ್ದರು; ಇತ್ತ ಮನಸ್ಸೂ ಮುರಿದಿತ್ತು. ಆದ್ದರಿಂದ ಅವರು ಸ್ವರೂಪಾನಂದರಲ್ಲಿ ಕೆಲವು ದಿನಗಳ ಮಟ್ಟಿಗೆ ತಮಗೆ ರಜೆ ಕೊಡಬೇಕೆಂದು ಕೇಳಿ ಕೊಂಡರು. ಸ್ವರೂಪಾನಂದರೂ ಸಹ ಅವರ ದೇಹ-ಮನಸ್ಸಿನ ಸ್ಥಿತಿಯನ್ನು ಮನಗಂಡು ಅನುಮತಿಯನ್ನು ನೀಡಿದರು. ಮಾಯಾವತಿ ಆಶ್ರಮದ ಕಟ್ಟಡಗಳಿಂದ ಸ್ವಲ್ಪ ದೂರವಾಗಿ, ಕಾಡಿನ ಮಧ್ಯೆ ಒಂದು ಕುಟೀರವಿತ್ತು. ಏಕಾಂತದಲ್ಲಿದ್ದುಕೊಂಡು ಜಪ-ಧ್ಯಾನ ಮಾಡಬೇಕೆಂದು ಯಾರಾದರೂ ಇಚ್ಛಿಸಿದರೆ ಅದನ್ನು ಉಪಯೋಗಿಸಿಕೊಳ್ಳಬಹುದಿತ್ತು. ವಿರಜಾನಂದರು ಅಲ್ಲಿದ್ದುಕೊಂಡು, ಮೌನವನ್ನಾಚರಿಸುತ್ತ ಏಕಾಂತದಲ್ಲಿ ಸಾಧನೆ ಯನ್ನು ಮಾಡಲು ನಿಶ್ಚಯಿಸಿದರು. ಸ್ವರೂಪಾನಂದರು ಆಶ್ರಮ ದಿಂದಲೇ ಊಟ-ತಿಂಡಿಗಳನ್ನು ಕಳುಹಿಸುವ ಏರ್ಪಾಟು ಮಾಡಿ ದರು. ಹೀಗಾಗಿ ಕಾಳೀಕೃಷ್ಣರು ಆಶ್ರಮಕ್ಕೆ ಬರುವ ಆವಶ್ಯಕತೆಯೇ ಇರುತ್ತಿರಲಿಲ್ಲ. ಯಾರೊಂದಿಗೂ ಬೆರೆಯದೆ, ತಮ್ಮ ಮನದಿಚ್ಛೆ ಯಂತೆ ಕಠೋರ ಸಾಧನೆಯಲ್ಲಿ ಮುಳುಗಿದರು. ದಿನವೂ ೧೪-೧೫ ಗಂಟೆಗಳ ಕಾಲ ಜಪಧ್ಯಾನ ಮಾಡುತ್ತಿದ್ದರು.

ಈ ರೀತಿಯ ಏಳೆಂಟು ತಿಂಗಳ ತೀವ್ರವಾದ ಸಾಧನೆಯ ಫಲಸ್ವರೂಪವಾಗಿ ಅವರಲ್ಲಿ ಒಂದು ರೀತಿಯ ಮಾನಸಿಕ ಬಳಲಿಕೆ ಕಂಡುಬಂತು. ದೃಢಸಂಕಲ್ಪ ಮಾಡಿ ಸಾಧನೆಗೆ ತೊಡಗಿದ್ದರಿಂದ, ಏನಾದರಾಗಲಿ ಬಿಡುವುದಿಲ್ಲವೆಂದು ನಿಶ್ಚಯಿಸಿ, ತಮ್ಮ ಸಾಧನಾ ಕ್ರಮವನ್ನೇನೂ ಬದಲಾಯಿಸಲಿಲ್ಲ. ಬಹಳವಾದ ಆಯಾಸ

---

[೧] ಪಶ್ಚಿಮ ಪ್ರಾಂತ್ಯಗಳಲ್ಲಿನ ನಗರವೊಂದರಲ್ಲಿ ಒಬ್ಬರು ಸ್ವಾಮಿ ವಿರಜಾ ನಂದರ ಸಂಪರ್ಕಕ್ಕೆ ಬಂದು, ಅವರಿಂದ ಅದೆಷ್ಟು ಆಕರ್ಷಿತರಾಗಿದ್ದರೆಂದರೆ, ಅವರಿಂದ ಮಂತ್ರದೀಕ್ಷೆ ಪಡೆಯಬೇಕೆಂದು ಬಹಳ ಪ್ರಯತ್ನಪಟ್ಟರು. ಸ್ವಾಮಿ ವಿರಜಾನಂದರು ತಾವು ದೀಕ್ಷೆ ಕೊಡುತ್ತಿಲ್ಲವೆಂದು ತಿಳಿಸಿದರು. ಆದರೆ ಆತ ಸ್ವಾಮಿ ವಿರಜಾನಂದರನ್ನಲ್ಲದೆ ಬೇರೆ ಯಾರನ್ನೂ ಗುರುವಾಗಿ ಸ್ವೀಕರಿಸುವುದಿಲ್ಲವೆಂದು ತಿಳಿಸಿದರು. ವಿರಜಾನಂದರು ಅವನೊಂದಿಗೆ ಆಧ್ಯಾತ್ಮಿಕ ಸಾಧನೆಯ ಬಗ್ಗೆ ಕೆಲವು ಸಾಮಾನ್ಯವಾದ ವಿಷಯಗಳನ್ನು ಸಮಾಲೋಚಿಸುತ್ತಿದ್ದರು. ಆತನು ನಗರದ ಒಂದು ಶಿವಮಂದಿರದಲ್ಲಿ ದಿನವೂ ಬಹಳವಾಗಿ ಧ್ಯಾನ-ಧಾರಣಾದಿಗಳನ್ನು ಮಾಡುತ್ತಿದ್ದ. ಸ್ವಾಮಿ ವಿರಜಾನಂದರು ಮಾಯಾವತಿಗೆ ಹಿಂದಿರುಗಿದ ನಂತರ ಆತನು ಕೆಲವು ದಿನಗಳ ಹಿಂದೆ ಆಸನದಲ್ಲಿ ಕುಳಿತು ಧ್ಯಾನಮಗ್ನನಾಗಿದ್ದುಕೊಂಡೇ ತನ್ನ ಶರೀರವನ್ನು ತ್ಯಜಿಸಿರುವುದಾಗಿ ಆತನ ತಮ್ಮನ ಪತ್ರದಿಂದ ತಿಳಿದುಬಂತು.

[೨] ಸ್ವಾಮೀಜಿಯವರ ಆರೋಗ್ಯವು ಆ ಸಮಯದಲ್ಲಿ ಬಹಳ ಹದಗೆಟ್ಟಿತ್ತು. ೪-೫ ಮಂದಿ ಸರದಿಯ ಪ್ರಕಾರ ಹಗಲೂ-ರಾತ್ರಿ ಅವರ ಸೇವಾಕಾರ್ಯ ದಲ್ಲಿ ನಿರತರಾಗಿರಬೇಕಾಗಿತ್ತು. ಸ್ವಾಮೀಜಿಯವರು ಒಮ್ಮೆ ತಮ್ಮ ಸೇವೆ ಮಾಡುತ್ತಿದ್ದವರಿಗೆ, 'ನೀವು ಇಷ್ಟು ಮಂದಿ ಸೇರಿಯೂ ಸರಿಯಾಗಿ ಸೇವೆ ಮಾಡಲಾಗುತ್ತಿಲ್ಲ. ಕಾಳೀಕೃಷ್ಣನಾಗಿದ್ದರೆ ಒಬ್ಬನೇ ಈ ಎಲ್ಲ ಕೆಲಸಗಳನ್ನು ನಿಭಾಯಿಸುತ್ತಿದ್ದ' ಎಂದು ಗದರಿಸಿ ಹೇಳಿದ್ದರು.

ವುಂಟಾದಾಗ ಶಾಸ್ತ್ರಗ್ರಂಥಗಳ ಅಧ್ಯಯನಕ್ಕೆ ತೊಡಗುತ್ತಿದ್ದರು. ಹೀಗೆಯೇ ಮತ್ತೂ ಕೆಲವು ತಿಂಗಳುಗಳು ಕಳೆದವು; ಕ್ರಮವಾಗಿ ಬಳಲಿಕೆಯೂ ಹೆಚ್ಚಾಗತೊಡಗಿತು. ಕೊನೆಕೊನೆಗಂತೂ ಮೆದುಳು ಜಡವಾದಂತೆ ಅನಿಸತೊಡಗಿತು, ಶರೀರ-ಮನಸ್ಸು ನಿತ್ರಾಣವಾಗ ತೊಡಗಿತು. ಒಮ್ಮೆಗೇ ಜಪಧ್ಯಾನವನ್ನು ತೀವ್ರಗೊಳಿಸಿದ್ದು ಸಂಗತ ವಾಗಲಿಲ್ಲವೆಂಬುದು ಸ್ವಾಮಿ ವಿರಜಾನಂದರಿಗಾಗ ಮನವರಿಕೆ ಯಾಯಿತು. ಆದ್ದರಿಂದ ಮೌನವನ್ನೂ, ಕಠೋರತೆಯನ್ನೂ ಸಡಿಲಗೊಳಿಸಿ, ಗ್ರಂಥಾಧ್ಯಯನದಲ್ಲಿ ತೊಡಗಿದರು. ಹೀಗೆ ಮಾಡಿಯೂ ಸಹ ಹೆಚ್ಚು ಪ್ರಯೋಜನವಾಗಲಿಲ್ಲ. ಅನಾರೋಗ್ಯ ಮುಂದುವರಿಯುತ್ತಲೇ ಹೋಯಿತು. ಕೊನೆಗೆ ಎಲ್ಲರೂ ಅವರಿಗೆ ಕೊಲ್ಕತ್ತೆಗೆ ಹೋಗಿ ಆಯುರ್ವೇದ ಚಿಕಿತ್ಸೆಯನ್ನು ಪಡೆ ಯುವ ಸಲಹೆಯಿತ್ತರು. ಇಷ್ಟರಲ್ಲಿ ಹರಿ ಮಹಾರಾಜರು ಅಮೆ ರಿಕದಿಂದ ಹಿಂದಿರುಗಿ, ಬೃಂದಾವನದಲ್ಲಿ ತಪಸ್ಯೆಯನ್ನು ಆಚರಿಸು ತ್ತಿದ್ದರು. ಅವರೊಂದಿಗೆ ಕೆಲವು ದಿನಗಳಿದ್ದು ನಂತರ ಕೊಲ್ಕತ್ತೆಗೆ ಹೋಗುವುದೆಂದು ನಿರ್ಧರಿಸಿದ ಸ್ವಾಮಿ ವಿರಜಾನಂದರು, ಮಾಯಾವತಿಯಿಂದ ಬೃಂದಾವನಕ್ಕೆ ಹೊರಟು ಬಂದರು. ಆಗ ೧೯೦೩ರ ಅಕ್ಟೋಬರ್ ತಿಂಗಳು. ಸುಮಾರು ನಾಲ್ಕೂವರೆ ವರ್ಷ ಗಳ ನಂತರ ಹರಿ ಮಹಾರಾಜರೊಂದಿಗೆ ಭೇಟಿ; ಇಬ್ಬರಿಗೂ ಪರಸ್ಪರರನ್ನು ಕಂಡು ಬಹಳ ಆನಂದವಾಯಿತು. ಈ ಹಿಂದೆ ಸ್ವಾಮಿ ವಿರಜಾನಂದರು ಅಮೆರಿಕದಿಂದ ಹಿಂದಿರುಗಿದ ಹರಿ ಮಹಾರಾಜರೊಂದಿಗೆ ಪತ್ರ ವ್ಯವಹಾರವನ್ನು ಇಟ್ಟುಕೊಂಡಿದ್ದರು. ಒಂದೆರಡು ಪತ್ರಗಳಲ್ಲಿ ಹರಿ ಮಹಾರಾಜರು ವಿರಜಾನಂದರ ಮಾಯಾವತಿಯ ಏಕಾಂತದ ಸಾಧನೆಯನ್ನು ತುಂಬ ಪ್ರೋತ್ಸಾ ಹಿಸಿದ್ದರು. ಅವರ ಶರೀರವು ತೀವ್ರವಾದ ಸಾಧನೆಯಿಂದಾಗಿ ಅಸ್ವಸ್ಥಗೊಂಡಿದೆ ಎಂಬುದನ್ನು ತಿಳಿದು, ಪತ್ರವೊಂದರಲ್ಲಿ ದುಃಖ ವನ್ನು ವ್ಯಕ್ತಪಡಿಸುತ್ತ ಹೀಗೆಂದು ಬರೆದಿದ್ದರು:

ಬೃಂದಾವನ

೩೦.೧.೧೯೦೩

''....ನೀನು ತೀವ್ರವಾದ ಸಾಧನೆ ಮಾಡಲು ಇಚ್ಛೆಪಟ್ಟು ಅದಕ್ಕೆ ಪ್ರಯತ್ನಿಸಿದಾಗಲೆಲ್ಲ ಅಸ್ವಸ್ಥನಾಗುತ್ತಿರುವೆ. ಇದರಿಂದ ನನಗೆ ಬಹಳ ಖೇದವಾಗುತ್ತಿದೆ. ಮಹರ್ಷಿ ಪತಂಜಲಿಗಳು ಸಾಧ ನೆಗೆ ಅಡ್ಡಿ ಬರುವ ಅನೇಕ ಅಂತರಾಯಗಳನ್ನು ಉಲ್ಲೇಖಿಸಿದ್ದಾರೆ. ನನಗನಿಸಿದಂತೆ ಈ ರೀತಿಯ ಯಾವುದೋ ಒಂದು ಅಂತ ರಾಯವು ನಿನಗೆ ಅಡ್ಡಿಯನ್ನುಂಟುಮಾಡುತ್ತಿದೆ. ನಿನಗಿರುವ ಉತ್ಸಾಹವೇನೋ ಬಹಳವೆ; ಆದರೆ ಪ್ರಕೃತಿಯು ಪ್ರತಿಕೂಲ ವಾಗಿದೆ. ಪ್ರಕೃತಿಯನ್ನು ಪ್ರಸನ್ನಗೊಳಿಸಿದ ನಂತರವೇ ನೀನು ಜಯ ಗಳಿಸಬಲ್ಲೆ! ಬಲವಂತದಿಂದ ಏನೂ ಪ್ರಯೋಜನವಿಲ್ಲ; ಹಾಗೆ ಮಾಡಿದರೆ ಉಪಕಾರಕ್ಕಿಂತ ಹೆಚ್ಚಾಗಿ ಅನಿಷ್ಟದ ಸಂಭವವೇ ಹೆಚ್ಚು...''

*(ಸ್ವಾಮಿ ತುರೀಯಾನಂದರ ಇಂಗ್ಲಿಷ್ ಪತ್ರದ ಅನುವಾದ)*

## ೧೧

ನಾಲ್ಕೂವರೆ ವರ್ಷಗಳ ನಂತರ ಬೇಲೂರು ಮಠಕ್ಕೆ ಬಂದ ವಿರಜಾನಂದರಿಗೆ ಮಠವು ಬಿಕೋ ಎನ್ನುವಂತಿತ್ತು. ಅದೇ ಕೊಠಡಿ, ಅದೇ ಹಾಸಿಗೆ, ಅದೇ ಸಾಮಾನುಗಳು ಮೊದಲಿ ನಂತೆಯೇ ಜೋಡಿಸಲ್ಪಟ್ಟಿವೆ; ಆದರೆ ಸ್ವಾಮೀಜಿಯವರೆಲ್ಲಿ! ಹೃದಯ ಸೀಳಿ ದುಃಖವು ಉಮ್ಮಳಿಸಿ ಬಂತು. ಮೂರುವರ್ಷಗಳ ಹಿಂದೆ ಫಿಲಿಭಿತ್ ಸ್ಟೇಷನ್ನಿನಲ್ಲಿ ಸ್ವಾಮೀಜಿಯವರನ್ನು ಬೀಳ್ಕೊಂಡ ದೃಶ್ಯ ಕಣ್ಮುಂದೆ ತೇಲಿ ಬಂತು.

ಮಠಾಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದರು (ರಾಖಾಲ್ ಮಹಾರಾಜ್ ಅಥವಾ ರಾಜಾ ಮಹಾರಾಜ್) ವಿರಜಾನಂದರನ್ನು ಕೊಲ್ಕತ್ತೆಯ ವಿಖ್ಯಾತ ಆಯುರ್ವೇದ ಪಂಡಿತರಾದ ಶ್ಯಾಮಾ ದಾಸ್ ವಾಚಸ್ಪತಿಯವರಲ್ಲಿಗೆ ಕಳುಹಿಸಿ ಒಳ್ಳೆಯ ಚಿಕಿತ್ಸೆ ಮತ್ತು ಪಥ್ಯದ ವ್ಯವಸ್ಥೆಯನ್ನು ಮಾಡಿದರು. ಹೀಗೆ ಮೂರ್ನಾಲ್ಕು ತಿಂಗಳು ಕಳೆಯಿತಾದರೂ ಮೆದುಳಿನ ದುರ್ಬಲತೆ ಮತ್ತು ಶರೀರದ ಆಯಾಸ ಕಡಿಮೆಯಾಗಲಿಲ್ಲ. ರಾಜಾ ಮಹಾರಾಜರು ಮತ್ತು ಮಠದ ಇತರ ಸಂನ್ಯಾಸಿಗಳು ವಿರಜಾನಂದರ ವಿಷಯ ದಲ್ಲಿ ತುಂಬ ಚಿಂತಿತರಾದರು.

೧೯೦೪ರ ಮಾರ್ಚ್ ತಿಂಗಳಿನಲ್ಲೊಮ್ಮೆ ವಿರಜಾನಂದರಿಗೆ ಜಯರಾಂಬಾಟಿಗೆ ಹೋಗಿ ಶ್ರೀಮಾತೆಯವರ ದರ್ಶನ ಮಾಡಿ ಬರುವ ಪ್ರಬಲ ಇಚ್ಛೆಯಾಯಿತು. ಮಾತೆಯವರನ್ನು ನೋಡಿ ಐದು ವರ್ಷಗಳೇ ಸಂದಿದ್ದವು. ರಾಖಾಲ್ ಮಹಾರಾಜ್ ಸಹ ಹೋಗಿಬರಲು ಅನುಮತಿಯಿತ್ತರು.

ಹತ್ತು ವರ್ಷಗಳ ಹಿಂದೆ ವಿರಜಾನಂದರು ಮಲೇರಿಯಾಕ್ಕೆ ತುತ್ತಾಗಿ ತುಂಬ ಸೊರಗಿ ಹೋಗಿದ್ದನ್ನು ಕಂಡು ಶ್ರೀಮಾತೆಯವರು ಬೆಚ್ಚಿಬಿದ್ದಿದ್ದರು. ಈ ಬಾರಿಯೂ ಹಾಗೆಯೇ ಆಯಿತು. ಆದರೆ ಅವರನ್ನು ನೋಡಿದಾಕ್ಷಣ ಅಂತರ್ಯಾಮಿನಿಯಾದ ತಾಯಿಗೆ ಇದು ದೇಹದ ವ್ಯಾಧಿಯಲ್ಲ ಎಂಬುದು ತಿಳಿದುಹೋಯಿತು. ಅವರು, ''ಧ್ಯಾನವನ್ನು ಎಲ್ಲಿ ಮಾಡುತ್ತಿರುವೆ? ಹೃದಯ ದಲ್ಲೊ? ಸಹಸ್ರಾರದಲ್ಲೊ?'' ಎಂದು ಕೇಳಿದರು. ''ಸಹಸ್ರಾರ ದಲ್ಲಿ. ಏಕೆಂದರೆ ಅಲ್ಲಿ ಧ್ಯಾನಿಸಲು ತುಂಬ ಚೆನ್ನಾಗಿರುತ್ತದೆ, ಆನಂದವೂ ಆಗುತ್ತದೆ'' ಎಂದರು ಕಾಳೀಕೃಷ್ಣ.

ಇದನ್ನು ಕೇಳಿ ಶ್ರೀಮಾತೆಯವರು ಗಾಬರಿಯಿಂದ, ''ಮಗು, ನೀನೇನು ಮಾಡುತ್ತಿರುವೆ? ಅದು ಕೊನೆಯ ಹಂತವನ್ನು ತಲು ಪಿದ ಪರಮಹಂಸ ಸ್ಥಿತಿ. ಒಮ್ಮೆಗೇ ಮನಸ್ಸನ್ನು ಅಷ್ಟು ಉನ್ನತ ಸ್ತರದಲ್ಲಿಡಲು ಎಲ್ಲರಿಗೂ ಸಾಧ್ಯವೇನು? ಮೊದಲು ಮನಸ್ಸನ್ನು ಸ್ವಲ್ಪ ಹೊತ್ತು ಶಿರದಲ್ಲಿರಿಸಿ, ನಂತರ ಹೃದಯಕ್ಕೆ ಇಳಿಸಿ, ಅಲ್ಲಿ ಇಷ್ಟ ದೇವತೆಯ ಧ್ಯಾನವನ್ನು ಮಾಡಬೇಕು'' ಎಂದು ತಿಳಿಸಿಕೊಟ್ಟರು.

ಯಾವುದನ್ನು ಅಷ್ಟೊಂದು ನಿಯಮ ಪಾಲಿಸಿ, ಚಿಕಿತ್ಸೆ, ಪಥ್ಯಗಳಿಂದ ಮಾಡಲಾಗಲಿಲ್ಲವೋ ಅದನ್ನು ಶ್ರೀಮಾತೆಯವರ

ಸಾಮಾನ್ಯ ಸಲಹೆಯು ಸಾಧ್ಯಮಾಡಿತು. ತಮ್ಮ ಧ್ಯಾನದ ಪ್ರಣಾಳಿಯನ್ನು ಬದಲಾಯಿಸಿದ ಕೆಲವು ದಿನಗಳಲ್ಲೇ ವಿರಜಾನಂದರು ಅದ್ಭುತ ಉಪಕಾರವನ್ನು ಪಡೆದರು. ಮುಂದೆ ತಮ್ಮ ಇಳಿವಯಸ್ಸಿನಲ್ಲಿ ಈ ಘಟನೆಯನ್ನು ಕುರಿತು, ''ಸಿದ್ಧ ಗುರುವಿನ ಆವಶ್ಯಕತೆ ಅದಕ್ಕಾಗಿಯೇ; ತಾಯಿಯವರ ಆ ಉಪದೇಶಾಮೃತ ನನಗೇನಾದರೂ ಆಗ ದೊರೆಯದಿದ್ದರೆ ನನ್ನ ಜೀವನ ವ್ಯರ್ಥವಾಗಿ ಹೋಗುತ್ತಿತ್ತು. ಚಿರಕಾಲವೂ ರೋಗದಿಂದ ನರಳಬೇಕಾಗುತ್ತಿತ್ತು, ಇಲ್ಲವೇ ಬುದ್ಧಿಭ್ರಮಣೆಯಾಗುತ್ತಿತ್ತು'' ಎಂದು ಭಾವೋದ್ವೇಗದಿಂದ ಹೇಳುತ್ತಿದ್ದರು.

ಹರಿ ಮಹಾರಾಜರು ೧೬ನೇ ಜುಲೈ ೧೯೦೩ರಲ್ಲಿ ಬೃಂದಾವನದಿಂದ ಬರೆದ ಪತ್ರದಲ್ಲಿ ವಿರಜಾನಂದರಿಗೆ ಹೀಗೆಂದು ಬರೆದಿದ್ದರು:

''ನಿನಗಿಚ್ಛೆಯಾದಲ್ಲಿ ನನ್ನಲ್ಲಿ ನಿನ್ನ ಸಂದೇಹಗಳನ್ನೇನೋ ಕೇಳಬಹುದು. ಅದಕ್ಕೆ ಸಮರ್ಪಕವಾದ ಉತ್ತರ ಕೊಡುವಲ್ಲಿ ನನ್ನಿಂದ ಬಹುಶಃ ಕುಂದೂ ಉಂಟಾಗದು. ಆದರೆ ನಿನ್ನ ತೊಂದರೆಗಳನ್ನು ಶ್ರೀಮಾತೆಯವರಲ್ಲಿ ನಿವೇದಿಸಿಕೊಳ್ಳುವುದೇ ಇಹಪರದಲ್ಲೂ ನಿನಗೆ ಶ್ರೇಯಸ್ಕರ. ಹಾಗೂ ಅವರಿಂದಲೇ ನಿನಗೆ ಅತ್ಯುತ್ತಮವಾದ ಪರಿಹಾರ ಸಿಗುವುದೆಂದು ನನ್ನ ಕಡು ವಿಶ್ವಾಸ. ಏಕೆಂದರೆ ಅವರು ನಿನ್ನ ಇಷ್ಟದೈವ ಮತ್ತು ಮಮತೆಯ ತಾಯಿ.''

೧೯೦೪ರ ಮೇ ತಿಂಗಳಲ್ಲಿ ನಿರಂಜನ ಮಹಾರಾಜರು ಹರಿದ್ವಾರದಲ್ಲಿ ತಮ್ಮ ಶರೀರವನ್ನು ತ್ಯಜಿಸಿದ್ದರಿಂದ ಕಾಳೀಕೃಷ್ಣರ ಮನಸ್ಸು ವಿಷಣ್ಣವಾಯಿತು. ನಿರಂಜನರದು ದೀರ್ಘ ಸುಘಟಿತ ದೇಹ, ಗೌರವರ್ಣವಲ್ಲದಿದ್ದರೂ ಅಭಿರಾಮ. ಅವರ ನೋಟ ಹಾಗೂ ಚಲನವಲನದಲ್ಲಿ ಒಂದು ಅಪೂರ್ವ ಗಾಂಭೀರ್ಯ ಹೊರಹೊಮ್ಮುತ್ತಿತ್ತು. ಆಲ್ಖಾಲ್ಲಾ (ನಿಲುವಂಗಿ) ತೊಟ್ಟು , ತಲೆಗೆ ರುಮಾಲು ಸುತ್ತಿ ಹೊರಗೆ ತಿರುಗಾಡಲು ಹೊರಟರೆಂದರೆ ಎಲ್ಲರೂ ಅವರನ್ನು ಬಿಡುಗಣ್ಣಿನಿಂದ ನೋಡುತ್ತಿದ್ದರು. ಅವರದು ಬಾಲಕನಂತಹ ಸರಳ ಸ್ವಭಾವ. ಜನರೊಂದಿಗೆ ಬಹುಬೇಗ ಬೆರೆಯಬಲ್ಲವರಾಗಿದ್ದರು. ಮಠದಲ್ಲಿ ಅವರನ್ನು 'ಗೂಂಡಾ' ಎಂದೇ ಕರೆಯುತ್ತಿದ್ದರು, ಆದರೆ ಹೊರಗಿನ ಜನರು ಅವರ ಮಧುರವಾದ ಮಾತುಗಳಿಂದ ಪ್ರಭಾವಿತರಾಗದೆ ಇರಲಾಗುತ್ತಿರಲಿಲ್ಲ. ವಿರಜಾನಂದರಂತೂ ನಿರಂಜನ ಮಹಾರಾಜರಿಂದ ಪಡೆದ ಸ್ನೇಹಾದರಗಳು ಅಪಾರ. ಅವರೊಂದಿಗೆ ಅನೇಕ ಸ್ಥಳಗಳಲ್ಲಿ ತಿರುಗಾಡಿದ್ದರು, ಜಯರಾಂಬಾಟಿಗೂ ಒಂದೆರಡು ಸಲ ಹೋಗಿಬಂದಿದ್ದರು. ಅಲ್ಲಿಗೆ ಹೋಗಿದ್ದಾಗ ನಿರಂಜನ ಮಹಾರಾಜರು ಲಾಠಿ ಮತ್ತು ಧನುಸ್ಸಿಗಾಗಿ ಉಚಿತವಾದ ಬಲಿತ ಬೊಂಬಿನ ಸಂಗ್ರಹಕ್ಕಾಗಿ ಹಳ್ಳಿಯ ಸುತ್ತಮುತ್ತಲೂ ಬಿದಿರಿನ ಮೆಳೆಗಳಲ್ಲಿ ಹುಡುಕಾಟ ನಡೆಸುತ್ತಿದ್ದರು. 'ನಿರಂಜನನು ಶ್ರೀರಾಮನ ಅಂಶದಿಂದ ಜನ್ಮ ತಳೆದಿದ್ದಾನೆ' ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಅದಕ್ಕಾಗಿಯೇ ಏನೋ ಅವರಿಗೆ ಬಿಲ್ಲುಬಾಣ ಮತ್ತು ಲಾಠಿಗಳ ಬಗ್ಗೆ ವಿಶೇಷ ಒಲವು. ಬಿದಿರನ್ನು ಕತ್ತರಿಸಿ ತಂದು ಬಹಳ ಪರಿಶ್ರಮ ವಹಿಸಿ, ಚೂರಿಯಿಂದ ಮೇಲ್ಭಾಗವನ್ನು ಹೆರೆದು, ಅದಕ್ಕೆ ಎಣ್ಣೆ ಬಟ್ಟೆಯನ್ನು ಸುತ್ತಿ, ಹೊಗೆ ತಗುಲಿ ಹದವಾಗಲೆಂದು ಅಡಿಗೆ ಮನೆಯ ಹಲಗೆಯ ಮೇಲಿಡುತ್ತಿದ್ದರು. ಈ ನೆನಪುಗಳೆಲ್ಲ ವಿರಜಾನಂದರ ಮನದಂಗಳದಲ್ಲೀಗ ತೇಲಿ ಬಂತು.



ಸ್ವಾಮಿ ನಿರಂಜನಾನಂದರು (೧೮೬೨-೧೯೦೪)

* * * *

ಮಠಾಧ್ಯಕ್ಷರಾದ ಪೂಜ್ಯ ಬ್ರಹ್ಮಾನಂದರಿಗೆ ತಮ್ಮ ಪತ್ರ ವ್ಯವಹಾರವನ್ನು ನೋಡಿಕೊಳ್ಳಲು ಒಬ್ಬ ಸಹಾಯಕರ ಅಗತ್ಯವಿತ್ತು. ವಿರಜಾನಂದರನ್ನು ಕೇಳಲಾಗಿ ಅವರು ಆನಂದದಿಂದ ಈ ಕೆಲಸಕ್ಕೆ ಒಪ್ಪಿಕೊಂಡರು. ಶ್ರೀರಾಮಕೃಷ್ಣರ ಮಾನಸಪುತ್ರರಾದ ಬ್ರಹ್ಮಾನಂದರ ಕಿಂಚಿತ್ ಸೇವೆಯ ಅವಕಾಶ ಸಿಕ್ಕಿದ್ದಕ್ಕಾಗಿ ಸಹಜವಾಗಿಯೇ ಸೇವಾಪ್ರವೃತ್ತರಾದ ವಿರಜಾನಂದರು ಸುಕೃತಗೊಂಡರು. ರಾಜಾ ಮಹಾರಾಜರ ಮನಸ್ಸು ಸರ್ವದಾ ಉನ್ನತ ಆಧ್ಯಾತ್ಮಿಕ ಭೂಮಿಕೆಯಲ್ಲಿ ಸಂಚರಿಸುತ್ತಿತ್ತು. ಆದ್ದರಿಂದ ಅವರಿಗೆ ಪತ್ರಗಳನ್ನು ಓದುವುದಾಗಲಿ, ಅದಕ್ಕೆ ಪ್ರತ್ಯುತ್ತರ ಬರೆಯುವುದಾಗಲಿ ಅವರ ಸ್ವಭಾವಕ್ಕೆ ವಿರುದ್ಧವಾಗಿತ್ತು. ಹಲವೊಮ್ಮೆ ವಿರಜಾನಂದರು ಉತ್ತರಿಸಿದ ಪತ್ರಗಳನ್ನು ಅವರ ಸಹಿಗಾಗಿ ಕೊಂಡೊಯ್ದು ೧೦-೧೨ ದಿನಗಳೇ ಕಳೆದರೂ, ಸಹಿಯಾಗದೇ ಹಾಗೆಯೇ ಉಳಿದಿರುತ್ತಿದ್ದವು. ಸಹಿಗಾಗಿ ಒತ್ತಾಯಿಸಿದಾಗ ಕೆಲವೊಮ್ಮೆ ಅವರು 'ನೀನೇ ಸಹಿ ಮಾಡಿಬಿಡಪ್ಪ' ಎಂದು ಹೇಳಿದ್ದುಂಟು. ವಿರಜಾನಂದರೂ ಸಹ ಹಾಗೆಯೇ ಮಾಡಿದ್ದುಂಟು. *(ಮುಂದುವರಿಯುವುದು)*